KAMS610005682024

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಪಿರಿಯಾಪಟ್ಟಣ**

ಉಪಸ್ಥಿತರುಃ

**ಶ್ರೀ ಧನುರಾಜ್ ಎಸ್.ಎಂ., ಬಿ.ಎ., ಎಲ್ಎಲ್‌ಬಿ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ಪಿರಿಯಾಪಟ್ಟಣ

**ಸಿ.ಸಿ.ಸಂಖ್ಯೆ.133/2024**

**ದಿನಾಂಕ: 20 ನೇ ಜುಲೈ ಮಾಹೆ 2026 ರಂದು**

| | |
|---|---|
| ಫಿರ್ಯಾದುದಾರರುಃ | ಸರ್ಕಾರದ ಪರವಾಗಿ ಪಿರಿಯಾಪಟ್ಟಣ ಪೊಲೀಸ್ ಠಾಣಾ ಆರಕ್ಷಕರು, ಪಿರಿಯಾಪಟ್ಟಣ<br>(ಸಹಾಯಕ ಸರ್ಕಾರಿ ಅಭಿಯೋಜಕರು) |
| | **ವಿರುದ್ಧ** |
| ಆರೋಪಿಃ | ಪ್ರಸನ್ನ.ಕೆ.ಇ,<br>ಬಿನ್ ಈಶ್ವರ,<br>ವಯಸ್ಸು 23 ವರ್ಷ,<br>ವಾಸ.ಕಂದೇಗಾಲ ಗ್ರಾಮ,<br>ಪಿರಿಯಾಪಟ್ಟಣ ತಾಲ್ಲೂಕು,<br>ಮೈಸೂರು ಜಿಲ್ಲೆ.<br>**(ಆರೋಪಿ ಪರ ಶ್ರೀ ಜಿ ಸಿ ಜಿ ., ವಕೀಲರು).** |

| | | |
|---|---|---|
| 1. | ಕೃತ್ಯ ನಡೆದ ದಿನಾಂಕ | 24.10.2023 |
| 2. | ಪ್ರಕರಣ ವರದಿಯಾದ ದಿನಾಂಕ | 24.10.2023 |
| 3. | ಫಿರ್ಯಾದುದಾರರ ಹೆಸರು | ಶ್ರೀ ಕೃಷ್ಣ |
| 4. | ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | 07.02.2026 |
| 6. | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 10.07.2026 |
| 7. | ಆರೋಪಿಗಳ ವಿರುದ್ಧ ಮಾಡಲಾದ ಆರೋಪಿ | ಕಲಂ 279, 304(ಎ) ಐಪಿಸಿ ಮತ್ತು 187 ಐಎಂವಿ ಆಕ್ಟ್ |
| 8. | ನ್ಯಾಯಾಧೀಶರ ಅಭಿಪ್ರಾಯ | ಆರೋಪಿ ಬಿಡುಗಡೆಗೆ ಅರ್ಹನಾಗಿರುತ್ತಾನೆ. |
| 9. | ಫಿರ್ಯಾದುದಾರರನ್ನು ಪ್ರತಿನಿಧಿಸುವ ವಕೀಲರು | ಸರ್ಕಾರಿ ಸಹಾಯಕ ಅಭಿಯೋಜಕರು |
| 10. | ಆರೋಪಿಗಳನ್ನು ಪ್ರತಿನಿಧಿಸುವ ವಕೀಲರು | ಆರೋಪಿ ಪರ ಶ್ರೀ ಜಿ ಸಿ ಜಿ ವಕೀಲರು |

**(ಧನುರಾಜ್ ಎಸ್.ಎಮ್)**
**ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ. ದ. ನ್ಯಾ ದಂ.**
**ಪಿರಿಯಾಪಟ್ಟಣ**

## ತೀರ್ಪು

ಪಿರಿಯಾಪಟ್ಟಣ ಪೊಲೀಸ್ ಠಾಣಾ ಆರಕ್ಷಕ ನಿರೀಕ್ಷಕರು ಆರೋಪಿಯ ವಿರುದ್ಧ ಭಾ.ದಂ.ಸಂ.ಕಲಂ 279 ಮತ್ತು 304(ಎ) ಮತ್ತು ಮೋ.ವಾ.ಕಾ. ಕಲಂ 187 ರ ಅಡಿಯಲ್ಲಿ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

## 2. ಅಭಿಯೋಜನೆಯ ಪ್ರಕರಣದ ಸಾರಾಂಶ ಈ ಕೆಳಗಿನಂತೆ ಇದೆ.

ದಿನಾಂಕ. 23.10.2023 ರಂದು ಸಂಜೆ 7.25 ಗಂಟೆ ಸಮಯದಲ್ಲಿ ಪಿರಿಯಾಪಟ್ಟಣ ಪೊಲೀಸ್ ಠಾಣಾ ಸರಹದ್ದು, ಪಿರಿಯಾಪಟ್ಟಣ ಟೌನ್ ಲಕ್ಷ್ಮಿ ಹೆಲ್ತ್ ಕೇರ್ ಎದುರು ಉತ್ತರ ದಕ್ಷಿಣವಾಗಿ ಹಾದಿರುವ ರಾಷ್ಟ್ರೀಯ ಹೆದ್ದಾಗಿ 275 ಮೈಸೂರು ಬಂಟ್ವಾಳ ರಸ್ತೆಯ ಎಡಭಾಗದಲ್ಲಿ ಮೃತಪಟ್ಟಿರುವ ಕಳಸಮ್ಮ ಕೋಂ ಲೇಟ್ ಕೆಂಪಯ್ಯ ರವರು ಪಿರಿಯಾಪಟ್ಟಣ ಟೌನಿನ ಅರಸು ಭವನದ ಬಳಿ ಹೂವು, ಎಲೆ, ಅಡಿಕೆ ಮತ್ತು ಹೂವು ವ್ಯಾಪ್ಯಾರ ಮುಗಿಸಿಕೊಂಡು ವಾಪಸ್ಸು ಮನೆಗೆ ಹೋಗುತ್ತಿದ್ದಾಗ ಮೈಸೂರು ಕಡೆಯಿಂದ ಕುಶಾಲನಗರದ ಕಡೆಗಾದಂತೆ ಹೋಗುತ್ತಿದ್ದ ಆರೋಪಿಯು ತನ್ನ ಬಾಬ್ತು ಕೆಎ-22-ಡಬ್ಲ್ಯೂ-1806 ರ ಟಿವಿಎಸ್ ಕಂಪನಿಯ ರೈಡರ್ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದ ಮೃತ ಕಳಸಮ್ಮ ರವರಿಗೆ ಡಿಕ್ಕಿ ಮಾಡಿದ ಪರಿಣಾಮ ಕಳಸಮ್ಮ ರವರ ತಲೆಗೆ, ಕಾಲಿಗೆ ಮತ್ತು ಮೈಕೈಗೆ ರಕ್ತ ಗಾಯವಾಗಿದ್ದು,ಕಳಸಮ್ಮರವರನ್ನು ಪಿರಿಯಾಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆ ಬಗ್ಗೆ ಮೈಸೂರಿನ ಕೆ ಆರ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುತ್ತಿದ್ದಾಗ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ.24.10.2023 ರಂದು ಬೆಳಗಿನ ಜಾವ 2.35 ಗಂಟೆ ಸಮಯದಲ್ಲಿ ಅಪಘಾತದಿಂದಾದ ಗಾಯಗಳಿಂದಲೇ ಮೃತಪಟ್ಟಿರುವುದು ಹಾಗೂ ಆರೋಪಿಯು ಅಪಘಾತದ ನಂತರ ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸದೆ ಇರುವುದು ಮತ್ತು ಅಪಘಾತದ ಮಾಹಿತಿಯನ್ನು ಪೊಲೀಸರಿಗೆ ತಿಳಿಸದೆ ಇರುವುದು ತನಿಖೆಯಿಂದ ದೃಢಪಟ್ಟಿರುತ್ತದೆ.

**3**. ದಿನಾಂಕ. 24.10.2023 ರಂದು ಎಂದು ಚಾಸಾ.15–ರವಿ ಕುಮಾರ್, ಪಿ ಎಸ್ ಐ ವರು ಚಾಸಾ.1–ಶ್ರೀ ಕೃಷ್ಣ ರವರು ನೀಡಿದ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮ್ಮೆ ಸಂಖ್ಯೆ.243/2023 ರಂತೆ ಭಾ.ದಂ.ಸಂ. ಕಲಂ 279, 304(ಎ) ಮತ್ತು ಕಲಂ 187 ಐ.ಎಂ.ವಿ ಆಕ್ಟ್ ರಡಿಯಲ್ಲಿ ಪ್ರಕರಣವನ್ನು ದಾಖಲಿಸಿ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿ ಪಂಚನಾಮೆ ಮಾಡಿ ಸಾಕ್ಷಿದಾರರ ಹೇಳಿಕೆ ಪಡೆದುಕೊಂಡು ತನಿಖೆ ಪೂರ್ಣಗೊಂಡ ನಂತರ ಆರೋಪಿಯ ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**4**. ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನನ್ನು ಪಡೆದುಕೊಂಡಿರುತ್ತಾರೆ. ಆರೋಪಿಗೆ ಅಭಿಯೋಜನೆಯವರ ದಾಖಲೆಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಡಿಯಲ್ಲಿ ಪೂರೈಸಲಾಗಿರುತ್ತದೆ. ಆರೋಪಿತನ ಮೇಲೆ ಮಾಡಿದ ಆರೋಪಕ್ಕೆ ದೋಷಾರೋಪಣಾ ಪಟ್ಟಿಯನ್ನು ಭಾ.ದಂ.ಸಂ.ಕಲಂ. 279, 304(ಎ) ಮತ್ತು ಕಲಂ 187 ಐ.ಎಂ.ವಿ ಆಕ್ಟ್ ರಂತೆ ರಚಿಸಿ ಓದಿ ಹೇಳಲಾಯಿತು. ಆರೋಪಿ ತಮ್ಮ ತಪ್ಪನ್ನು ಒಪ್ಪಿಕೊಳ್ಳದೆ ವಿಚಾರಣೆ ಆಗಬೇಕೆಂದು ಕೇಳಿದ ಕಾರಣ ಪ್ರಕರಣವನ್ನು ವಿಚಾರಣೆಗೆ ಮುಂದೂಡಲಾಯಿತು.

**5.** ಆರೋಪಿ ಮೇಲೆ ಮಾಡಿದ ಆರೋಪಣೆಯನ್ನು ಸಾಬೀತುಪಡಿಸಲು ಅಭಿಯೋಜನೆಯು ಚಾಸಾ.1 ರವರನ್ನು ಫ್ರಾಸಾ.1 ರಂತೆ ಚಾಸಾ.2 ರವರನ್ನು ಫ್ರಾಸಾ.2 ರಂತೆ ಸಾಕ್ಷಿಗೆ ಒಳಪಡಿಸಿ ನಿಪಿ. 1 ರಿಂದ 11 ದಾಖಲೆಗಳನ್ನು ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ.

ದೂರುದಾರರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದು, ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಿ ಇತರೆ ಸಾಕ್ಷಿದಾರರಿಗೆ ಸಮನ್ಸ್ ನೀಡುವ ಅಭಿಯೋಜನೆಯ ಕೋರಿಕೆಯನ್ನು ನಿರಾಕರಿಸಲಾಯಿತು. ಆದ್ದರಿಂದ ಆರೋಪಿಯನ್ನು ಭಾ.ದಂ.ಸಂ.ಕಲಂ.313 ರ ಅಡಿಯಲ್ಲಿ ವಿಚಾರಣೆಗೆ ಒಳಪಡಿಸಿರುವುದಿಲ್ಲ.

**6**. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಮಾನ್ಯ ಆರೋಪಿ ಪರ ವಕೀಲರ ವಾದವನ್ನು ಆಲಿಸಿ ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಿದ್ದೇನೆ.

**7**. ಈಗ ನಿರ್ಣಯಿಸಬೇಕಾದ ಅಂಶಗಳು ಈ ಕೆಳಗಿನಂತಿವೆ.

**ಅಂಶಗಳು**

1. ಅಭಿಯೋಜನೆಯವರು ಆರೋಪಿಯು ಭಾರತ ದಂಡ ಸಂಹಿತೆ ಕಲಂ.279 ರಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ ?
2. ಅಭಿಯೋಜನೆಯವರು ಆರೋಪಿಯು ಭಾರತ ದಂಡ ಸಂಹಿತೆ ಕಲಂ.304(ಎ) ರಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ ?
3. ಅಭಿಯೋಜನೆಯವರು ಆರೋಪಿಯು ಮೋ.ವಾ.ಅ.ಕಾಯ್ದೆ ಕಲಂ 187 ರಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ ?
4. ಯಾವ ಆದೇಶ?

8. ಮೇಲ್ಕಂಡ ಅಂಶಗಳಿಗೆ ನನ್ನ ನಿರ್ಣಯಗಳು ಕೆಳಗಿನಂತೆ ಇವೆ.

**ಅಂಶ ನಂ.1 ರಿಂದ 3 : ನಕಾರಾತ್ಮಕವಾಗಿ**

**ಅಂಶ ನಂ.4 : ಅಂತಿಮ ಆದೇಶದಂತೆ ಕೆಳಕಂಡ ಕಾರಣಗಳಿಗಾಗಿ.**

**ಕಾರಣಗಳು**

9. **ಅಂಶ ನಂ.1 ರಿಂದ 3** :- ಈ ಮೂರು ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ ಚರ್ಚಿಸಲು ಒಟ್ಟಿಗೆ ಕೈಗೆತ್ತಿಕೊಳ್ಳಲಾಯಿತು. ಅಭಿಯೋಜಕರು ಆರೋಪಣೆಯನ್ನು ಸಾಬೀತುಪಡಿಸಲು ಈ ಪ್ರಕರಣದಲ್ಲಿ ದೂರುದಾರರಾದ ಚಾಸಾ.1/ಪ್ರಾಸಾ.1-ಕೃಷ್ಣ ರವರನ್ನು ಸಾಕ್ಷಿಗೆ ಒಳಪಡಿಸಿರುತ್ತಾರೆ. ಈ ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಆರೋಪಿಯ ಪರಿಚಯವಿಲ್ಲ. ಮೃತ ಕಳಸಮ್ಮ ರವರು ತನ್ನ ಅತ್ತೆ ಇದ್ದು, ದಿಃ 23.10.2023 ರಂದು ಸಂಜೆ 8-00 ಗಂಟೆ ಸಮಯದಲ್ಲಿ ತಾನು ಮನೆಯಲ್ಲಿ ಇದ್ದಾಗ ಯಾರೋ ತನಗೆ ಫೋನ್ ಮಾಡಿ ತನ್ನ ಅತ್ತೆಗೆ ಅಪಘಾತವಾಗಿ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಿಸಿರುವುದಾಗಿ ತಿಳಿಸಿದರು. ಕೂಡಲೇ ತಾನು ಆಸ್ಪತ್ರೆಗೆ ಹೋಗಿ ನೋಡಲಾಗಿ ತನ್ನ ಅತ್ತೆಗೆ ತಲೆಗೆ, ಕಾಲಿಗೆ ಮತ್ತು ಮೈಕೈಗೆ ಗಾಯಗಳಾಗಿದ್ದವು. ಆ ಸಮಯದಲ್ಲಿ ಪೊಲೀಸರು ಖಾಲಿ ಹಾಳೆಗೆ ತನ್ನ ಸಹಿ ಪಡೆದಿದ್ದರು. ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ದಾಖಲಾಗಿದ್ದಾಗ ರಾತ್ರಿ 2-35 ಗಂಟೆ ಸಮಯದಲ್ಲಿ ಮರಣ ಹೊಂದಿರುತ್ತಾರೆ. ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ತನಗೆ ಗೊತ್ತಿಲ್ಲ. ನಿಪಿ.1 ದೂರಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ.1 ಕ್ಕೆ ತಾನು ಪೊಲೀಸರ ಕೋರಿಕೆಯ ಮೇರೆಗೆ ಆಸ್ಪತ್ರೆಯಲ್ಲಿ ಸಹಿ ಮಾಡಿದ್ದು, ನಿಪಿ.1 ರಲ್ಲಿ ಬರೆದಿರುವ

ವಿಚಾರಗಳು ತನಗೆ ಗೊತ್ತಿರುವುದಿಲ್ಲ. ತಾನು ಪೊಲೀಸರ ಮುಂದೆ ಯಾವುದೇ ಮರು ಹೇಳಿಕೆ ನೀಡಿಲ್ಲ ಎಂದು ವ್ಯತಿರಿಕ್ತವಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾಡಿದ ಪಾಟೀ ಸವಾಲಿನಲ್ಲಿ ಸೂಚಿಸಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಅಭಿಯೋಜನೆಯು ದೂರುದಾರರಾದ ಫ್ರಾಸಾ.1 ರವರನ್ನು ಪಾಟೀ ಸವಾಲು ಮಾಡಿದರೂ ಪ್ರಕರಣವನ್ನು ಬೆಂಬಲಿಸುವಂತಹ ಯಾವುದೇ ಅಂಶಗಳನ್ನು ಹೊರತರಿಸತುವಲ್ಲಿ ಅಭಿಯೋಜನೆಯು ವಿಫಲಗೊಂಡಿದೆ.

**10.** ಚಾಸಾ.2/ಫ್ರಾಸಾ.2-ಸೋಮಶೇಖರ ಇವರು ಪ್ರತ್ಯಕ್ಷ ಸಾಕ್ಷಿ ಹಾಗೂ ಸ್ಥಳ ಮಹಜರ್ ಸಾಕ್ಷಿಯಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಬಗ್ಗೆ ತನಗೆ ಯಾವುದೇ ಮಾಹಿತಿ ಇರುವುದಿಲ್ಲ. ತಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ತನ್ನ ಸಮಕ್ಷಮ ಯಾವುದೇ ಪಂಚನಾಮೆ ಅಥವಾ ಮಹಜರ್ ಜರುಗಿಸಿರುವುದಿಲ್ಲ. ನಿಪಿ.3 ಮಹಜರಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುವುದಾಗಿ, ತನ್ನ ಸಮಕ್ಷಮ ಯಾವುದೇ ಕಚ್ಚಾ ನಕಾಶೆ ತಯಾರಿಸಿರುವುದಿಲ್ಲ. ಸಾಕ್ಷಿಗೆ ಕಚ್ಚಾ ನಕಾಶೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಕಚ್ಚಾ ನಕಾಶೆಯನ್ನು ನಿಪಿ-4 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ತಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುತ್ತಾರೆ.

**11.** ಅಭಿಯೋಜನೆಯು ಫ್ರಾಸಾ-1 ಮತ್ತು 2 ರವರನ್ನು ಪಾಟೀ ಸವಾಲು ಮಾಡಿರುತ್ತಾರೆ, ಆದರೆ ಸದರಿ ಪ್ರಕರಣಕ್ಕೆ ಬೆಂಬಲಿಸುವಂತಹ ಯಾವುದೇ ಅಂಶಗಳನ್ನು

ಹೊರತರಿಸುವಲ್ಲಿ ವಿಫಲಗೊಂಡಿರುತ್ತದೆ. ಅಭಿಯೋಜನೆಯ ಪರ ಹಾಜರುಪಡಿಸಲಾದ ಸಾಕ್ಷ್ಯಾದಾರಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ ನೋಡಿದಾಗ, ಸ್ವತಃ ಪಿರ್ಯಾಧಿ ಅಥವಾ ಪ್ರಾಸಾ-1ರವರೇ ಅಭಿಯೋಜನೆಯ ಪ್ರಕರಣವನ್ನು ಸಮರ್ಥಿಸಿರುವುದಿಲ್ಲ ಹಾಗೂ ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸದಿದ್ದ ಕಾರಣ, ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಿ, ಇತರೆ ಸಾಕ್ಷಿದಾರರಿಗೆ ಸಮನ್ಸ್ ನೀಡುವ ಅಭಿಯೋಜನೆಯ ಕೋರಿಕೆಯನ್ನು ನಿರಾಕರಿಸಲಾಯಿತು. ಆದ್ದರಿಂದ ಅಭಿಯೋಜನೆಯು ತಮ್ಮ ಪ್ರಕರಣವನ್ನು ನಿಸ್ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲವಾಗಿದೆ ಎಂದು ಪರಿಗಣಿಸಿ ಆರೋಪಿಯನ್ನು ಶಿಕ್ಷಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಿರ್ಧರಿಸಿ, ಮೇಲ್ಕಂಡ 1 ರಿಂದ 3 ನೇ ಅಂಶಗಳನ್ನು **ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

12. **ಅಂಶ ನಂ.4-** ಅಂಶ 1 ರಿಂದ 3 ರಲ್ಲಿ ವಿವರಿಸಿದ ಕಾರಣದಿಂದ ಅಭಿಯೋಜನೆಯವರು ಆರೋಪಿ ಮೇಲೆ ಮಾಡಿದ ಆರೋಪಣೆಯನ್ನು ಸಾಬೀತು ಮಾಡಲು ವಿಫಲರಾಗಿರುತ್ತಾರೆಂದು ತೀರ್ಮಾನಿಸಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ.255(1)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿತನನ್ನು ಭಾರತ ದಂಡ ಸಂಹಿತೆ ಕಲಂ.279, 304(ಎ) ಮತ್ತು ಮೋಟಾರು ವಾಹನ ಕಾಯಿದೆ ಕಲಂ

187 ರಡಿಯಲ್ಲಿ ಶಿಕ್ಷಾರ್ಹ ಅಪರಾದಗಳಿಂದ ದೋಷಮುಕ್ತಗೊಳಿಸಿ ನಿರ್ದೋಷಿಯೆಂದು ನಿರ್ಣಯಿಸಿ ಅವರನ್ನು ಬಿಡುಗಡೆ ಆದೇಶ ಮಾಡಲಾಗಿದೆ.

ಆರೋಪಿ ಮತ್ತು ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.

(ಶೀಘ್ರಲಿಗಾರರಿಗೆ ಗಣಕ ಯಂತ್ರದ ಮೂಲಕ ನೇರವಾಗಿ ಬೆರಳಚ್ಚು ಮಾಡಿಸಿ ಓದಿ ತಿದ್ದಿ ಇಂದು ಅಂದರೆ ದಿನಾಂಕ. **20 ನೇ ಜುಲೈ ಮಾಹೆ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು )

Digitally signed by DHANURAJ S M
Location: PRL.CIVIL JUDGE AND JMFC., PERIYAPATNA.

**(ಧನುರಾಜ್ ಎಸ್.ಎಮ್)**
**ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ. ದ. ನ್ಯಾ ದಂ.**
**ಪಿರಿಯಾಪಟ್ಟಣ**

## ಅನುಬಂಧ

### 1) ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರುಗಳ ಪಟ್ಟಿಃ

ಫ್ರಾಸಾ –1 ಕೃಷ್ಣ

ಫ್ರಾಸಾ –2 ಸೋಮಶೇಖರ

### 2)ಅಭಿಯೋಜನೆಯ ಪರ ನಿಶಾನೆಯಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ

ನಿಪಿ.1 ದೂರು

ನಿಪಿ.1(ಎ) ಫ್ರಾಸಾ–1 ರವರ ಸಹಿ

ನಿಪಿ .2 ಫ್ರಾಸಾ.1 ರವರ ಮರು ಹೇಳಿಕೆ

ನಿಪಿ. 3 ಸ್ಥಳ ಮಹಜರ್

ನಿಪಿ .3(ಎ) ಫ್ರಾಸಾ.2 ರವರ ಹೇಳಿಕೆ

| | |
|---|---|
| ನಿಪಿ.4 | ಕಚ್ಚಾ ನಕಾಶೆ |
| ನಿಪಿ.4(ಎ) | ಫ್ರಾಸಾ-2 ರವರ ಸಹಿ |
| ನಿಪಿ.5 | ಫ್ರಾಸಾ-2 ರವರ ಹೇಳಿಕೆ |
| ನಿಪಿ.6 | ಶವ ಪಂಚನಾಮೆ |
| ನಿಪಿ.7 | ಪಿ ಎಂ ವರದಿ |
| ನಿಪಿ.8 | ಐ ಎಂ ವಿ ವರದಿ |
| ನಿಪಿ.9 | ಕಲಂ 133 ನೋಟೀಸ್ |
| ನಿಪಿ.10 | ಕಲಂ 133 ನೋಟೀಸಿಗೆ ಉತ್ತರ |
| ನಿಪಿ.11 | ಇಂಡೆಮ್ ನಿಟಿ ಬಾಂಡ್ |

**3) ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆ ಮಾಲುಗಳ ಪಟ್ಟಿಃ**

– ಇಲ್ಲ –

**4) ಆರೋಪಿ ಪರ ವಿಚಾರಿಸಲ್ಪಟ್ಟ ಸಾಕ್ಷಿದಾರರುಗು ಮತ್ತು ನಿಶಾನೆಯಾಗಿ ಗುರುತಿಸಲ್ಪ ದಾಖಲಾತಿಗಳ ವಿವರಃ-**

– ಇಲ್ಲ –

Digitally signed by DHANURAJ S M
Location: PRL.CIVIL JUDGE AND JMFC., PERIYAPATNA.

**(ಧನುರಾಜ್ ಎಸ್.ಎಮ್)**
**ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ. ದ. ನ್ಯಾ ದಂ.**
**ಪಿರಿಯಾಪಟ್ಟಣ**